# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5045/2024 ಪ್ರಾಸಾ-09
ಚಾಸಾ-08

ದಿನಾಂಕಃ 08-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಕೆ.ಎಸ್. ಸ್ವಾಮಿ |
| **ತಂದೆಯ / ಗಂಡನ ಹೆಸರು** | ಸಿದ್ದಯ್ಯ |
| **ವಯಸ್ಸು** | 56 |
| **ಉದ್ಯೋಗ** | ಸಹಾಯಕ ಕಾರ್ಯ ಪಾಲಕ ಅಭಿಯಂತರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು |
| **ವಾಸಸ್ಥಳ** | ಬೆಂಗಳೂರು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

**ನಾನು ದಿ. 09.10.2023 ರಿಂದ ದಿ.29.08.2025 ರವರೆಗೆ ಲೋಕೋಪಯೋಗಿ ಇಲಾಖೆ ಉಪ-ವಿಭಾಗ ಕೊರಟಗೆರೆಯಲ್ಲಿ ಸಹಾಯಕ ಕಾರ್ಯ ಪಾಲಕ ಅಭಿಯಂತರರಾಗಿ , ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿ.27.05.2024 ರಂದು ಪಿ.ಎಸ್.ಐ ಕೊರಟಗೆರೆ ಯವರು ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸಿಕೊಡಲು ಮನವಿ ಕೊಟ್ಟಿದ್ದು ಅದರಂತೆ ನಾನು ನಮ್ಮ ಇಲಾಖೆಯ ಸಿಬ್ಬಂದಿಗಳಾದ ನವೀನ್ ಕುಮಾರ್ ಎಂ.ಎನ್ ಕಿರಿಯ ಇಂಜಿಯರ್ ರವರನ್ನು ನೇಮಕಮಾಡಿದ್ದು ಅವರು ದಿ. 31.05.2024 ರಂದು ಕೊರಟಗೆರೆ ತಾಲ್ಲೂಕು , ಬೈರೇನಹಳ್ಳಿ ಕ್ರಾಸ್ ನಲ್ಲಿರುವ ಎನ್.ಟಿ.ಆರ್ ಕಂಪರ್ಟ್ ಬಾರ್ ಅಂಡ್ ರೆಸ್ಟೋರೆಂಟ್ ಪಕ್ಕದಲ್ಲಿರುವ ಸ್ಥಳದಲ್ಲಿ ಚಾಸಾ-13 ರವರು ತೋರಿಸಿದ ಜಾಗವನ್ನು ಪರಿಶೀಲನೆ ಮಾಡಿ ನವೀನ್ ಕುಮಾರ್ ರವರು ನಕ್ಷ ತಯಾರಿಸಿ

ಜಿಪಿಎಸ್ ಪೊಟೋಗಳೊಂದಿಗೆ ನನಗೆ ಸಲ್ಲಿಸಿರುತ್ತಾರೆ, ಸದರಿ ನಕ್ಷೆ , ಜಿ.ಪಿ.ಎಸ್. ಪೊಟೋ, ಕವಚ ಪತ್ರದೊಂದಿಗೆ ನಾನು ದಿ.06.06.2024 ರಂದು ಕೊರಟಗೆರೆ ಪೊಲೀಸ್ ಠಾಣೆ ರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ಕವಚ ಪತ್ರ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಕವಚ ನಿಪಿ-15 ಎಂದು, ಸಾಕ್ಷಿ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ನಕ್ಷೆಯನ್ನು ನೋಡಿದೇನು ಅದನ್ನು ಗುರುತಿಸುತ್ತೇನೆ. ಸದರಿ ನಕ್ಷೆಯನ್ನು ನಿಪಿ-16 ಎಂದು ಗುರುತಿಸಲಾಯಿತು. ನಿಪಿ-16 ರಲ್ಲಿ ನವೀನ್ ಕುಮಾರ್ ರವರ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ನವೀನ್ ಕುಮಾರ್ ರವರ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು:- ಆರೋಪಿ- 1 ಮತ್ತು 2 ರಿಂದ 5 ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**